ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

Friday, the 24th July, 1981. Shravana 2, 1903.S.E.

The House met in the Assembly Chamber, Vidhana Soudha Bangalore, at Twelve of the Clock.

MR. SPEAKER (SRI K. H. RANGANATH) in the Chair.

STARRED QUESTIONS

(to which oral answers were given)

Waiving of Loans borrowed by Ryots in Tumkur District.

12 SRI S. LINGAIAH (Sira) Will the Minister for Co-operation be pleased to state :—

(a) the number of applications received from Land Holders to waive loans in Tumkur District (talukwise figures to be furnished and separate figures may please be furnished in respect of small and sufficient land holders) :

(b) the number of applications that have been examined and given compensation so far ;

(c) the number of Land Holders who have been given financial assistance and the amount incurred ?

SRI H. C. SRIKANTAIAH (Minister for Co-operation).—

(a) 47, 313.

Taluk	Small and marginal land holders	Sufficient land holders
Tumkur	5693	45
Kunigal	3036	123
Gubbi	5108	46
Tiptur	4783	74
Chicknayakanahally	2736	110
Turuvekere	4296	51
Madhugiri	7366	...
Koratagere	3818	185
Sira	6179	167
Pavagada	3429	169
	40343	970

(b) Considered 47313, no compensation has been paid.

(c) Does not arise.

ಶ್ರೀ ಎಸ್. ಲಿಂಗಯ್ಯ.— ನನ್ನ ಎರಡನೇ ಪ್ರಶ್ನೆಗೆ ಉತ್ತರವಾಗಿ ೧.ಪರಿಶೀಲಿಸಲಾದವುಗಳು ೪೭೩೧೩, ಪರಿಹಾರ ಕೊಟ್ಟಿರುವುದು ಏನೂ ಇಲ್ಲ'' ಎಂದು ಹೇಳಿದ್ದೀರಿ. ಹಾಗಿದ್ದರೆ ಸಾಲ ಮನ್ನಾ ಮಾಡುತ್ತೇವೆಂದು ಅರ್ಜಿಗಳನ್ನು ಸ್ವೀಕಾರ ಮಾಡಿದ ಉದ್ದೇಶವಾದರೂ ಏನು ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಮಾನ್ಯ ಅಧ್ಯಕ್ಷರೇ, ಸಾಲ ಮನ್ನಾ ಮಾಡುವುದಕ್ಕೋಸ್ಕರವೇ ಅರ್ಜಿಗಳನ್ನು ಕರೆದಿದ್ದು. ಮತ್ತು ತುಮಕೂರು ಜಿಲ್ಲೆಗೆ ಸರ್ಕಾರ ಇದಕ್ಕೋಸ್ಕರವಾಗಿ ೧೫ ಲಕ್ಷ ರೂ. ಗಳನ್ನು ಒದಗಿಸಿತ್ತು. ರೈತರಿಂದ ಬಂದಂಥ ಅರ್ಜಿಗಳನ್ನು ಪರಿಶೀಲನೆ ಮಾಡಲು ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ರಚನೆ ಮಾಡಲಾಗಿತ್ತು. ಸರ್ಕಾರ ಈ ರೈತರ ಸಾಲವನ್ನು ಮನ್ನಾ ಮಾಡಲು ಏನು ಒಂದು ನಾರಮ್ಸ್‌ನ್ನು ನಿಗದಿ ಮಾಡಿತ್ತು. ಅದರ ಒಂದು ವ್ಯಾಪ್ತಿಯಲ್ಲಿ ಯಾವ ಅರ್ಜಿಗಳೂ ಇರದಿದ್ದ ಕಾರಣದಿಂದ ಆ ಜಿಲ್ಲೆಗೆ ಕೊಟ್ಟಿದ್ದ ೧೫ ಲಕ್ಷ ರೂ. ಗಳು ಹಾಗೆಯೇ ಉಳಿದಿದೆ,

ಶ್ರೀ ಎಸ್. ಲಿಂಗಯ್ಯ.—ಪರಿಹಾರ ಪಡೆಯಲು ಯಾರೂ ಸಹ ಅರ್ಹರಿರಲಿಲ್ಲ ಎಂಬುದು ತಮ್ಮ ಉತ್ತರದಿಂದ ತಿಳಿದುಬರುತ್ತದೆ. ಆದರೆ ರಾಜ್ಯಾದ್ಯಂತ ಈ ಸಣ್ಣ ಹಿಡುವಳಿದಾರರು ಏನಿದ್ದಾರೆ, ಅವರುಗಳು ತುಂಬಾ ಕಷ್ಟದ ಸ್ಥಿತಿಯಲ್ಲಿರುವುದರಿಂದ, ಅವರು ತೆಗೆದುಕೊಂಡ ಸಾಲವನ್ನು ವಾಪಸ್ ಕೊಡದ ಸ್ಥಿತಿಯಲ್ಲಿದ್ದಾರೆ. ತಾವು ಸಾಲ ಮನ್ನಾ ಮಾಡಲು ಕೆಲವು ಷರತ್ತುಗಳನ್ನು ವಿಧಿಸಿದ್ದೀರಿ. ಈ ಷರತ್ತುಗಳ ಪ್ರಕಾರ ಯಾರಿಗೂ ಅನುಕೂಲ ಸಿಗದ ಕಾರಣ, ಈ ಷರತ್ತುಗಳನ್ನು ಕೈಬಿಟ್ಟು ಈ ವಿಚಾರದಲ್ಲಿ ಬೇರೆ ಯಾವುದಾದರೂ ಒಂದು ಮಾನ ದಂಡದಿಂದ ಅಳೆಯುವಂತಹ ಒಂದು ವ್ಯವಸ್ಥೆ ಮಾಡುತ್ತೀರಾ.

ಶ್ರೀ ಎಚ್. ಸಿ. ಶ್ರೀಕಂಠಯ್ಯ.— ಈಗಿರುವ ಷರತ್ತುಗಳನ್ನು ಕೈಬಿಟ್ಟರೆ ಎಲ್ಲ ಸಾಲಗಳಿಗೂ ವಿನಾಯಿತಿ ಕೊಡಬೇಕಾಗುತ್ತದೆ. ಆಗ ಅರ್ಜಿಗಳನ್ನೇ ಕರೆಯಬೇಕಾಗುವುದಿಲ್ಲ. ಸಾಲ ಮನ್ನಾ ಮಾಡಿದ್ದೇವೆಂದು ಸರ್ಕಾರ ಘೋಷಣೆ ಮಾಡಿದರೆ ಎಲ್ಲರ ಸಾಲವೂ ಮನ್ನಾ ಆಗುತ್ತದೆ.

ಶ್ರೀ ಕೆ. ಬಿ. ಮಲ್ಲಪ್ಪ.—ಸಾಲ ಮನ್ನಾ ಮಾಡಲು ಕೆಲವು ನಾರಮ್ಸ್ ಹಾಕಿದ್ದೀರಿ. ಅದರಂತೆ ಅಂತಿಮವಾಗಿ ಲೆಕ್ಕದಲ್ಲಿ ೬ ಆಣೆಗಿಂತ ಕಡಿಮೆ ಬೆಲೆಯಾದರೆ ಸಾಲ ಮನ್ನಾ ಮಾಡಲಾಗುತ್ತದೆಂದು ಹೇಳುತ್ತೀರಿ. ಆದರೆ ಅಧಿಕಾರಿಗಳು ಬೆಳೆಗಳನ್ನು ನೋಡಲು ಬಂದಾಗ ರಸ್ತೆಗಳ ಪಕ್ಕದಲ್ಲಿರುವ ಮತ್ತು ನಾಲೆಗಳ ಪಕ್ಕದಲ್ಲಿರುವ ಬೆಳೆಗಳನ್ನು ನೋಡಿ ೮ ಆಣೆ ಭಾಗ, ಬೇರೆ ಕಡೆಗಳಲ್ಲಿಯೂ ೧೦ ಆಣೆ ಭಾಗ, ಇಲ್ಲವೇ ೧೨ ಆಣೆ ಭಾಗ ಬೆಳೆಯಾಗಿದೆ ಎಂದು ವರದಿ ಕೊಟ್ಟುಬಿಡುತ್ತಾರೆ. ಆದರೆ ಸರ್ಕಾರ ಕಳೆದ ಸಲ ೧೦೨ ತಾಲ್ಲೂಕುಗಳಲ್ಲಿ ಅಭಾವ ಪರಿಸ್ಥಿತಿ ಇದೆ ಎಂದು ಘೋಷಣೆ ಮಾಡಿದ ಮೇಲೆ, ಸರ್ಕಾರದವರೇ ಕಷ್ಟದಲ್ಲಿರುವ ರೈತರ ಸಾಲಗಳನ್ನು ಹಾಗೂ ಸಾಲದ ಮೇಲಿನ ಬಡ್ಡಿಯನ್ನು ಮಜಾ ಮಾಡುತ್ತೇವೆಂದು ಘೋಷಣೆ ಮಾಡಿದ ನಂತರ ರೈತರು ಅರ್ಜಿಗಳನ್ನು ಹಾಕಿಕೊಂಡರು. ಆದರೆ ಈಗ ಅವರಿಗೆ ಯಾವುದೇ ತರಹದ ಲಾಭವಾಗಲಿಲ್ಲ.

ಅಧ್ಯಕ್ಷರು.—ಕೆಲವು ನಾರಮ್ಸ್‌ಗೆ ಒಳಪಟ್ಟು ಪರಿಹಾರ ಕೊಡಲಾಗುತ್ತದೆಂದು ಹೇಳಿದ್ದಾರೆ.

ಶ್ರೀ ಕೆ. ಬಿ. ಮಲ್ಲಪ್ಪ.—ಆ ನಾರಮ್ಸ್ ಏನು ಎಂಬ ಬಗ್ಗೆ ಮೊದಲೇ ಸರ್ಕಾರ ಹೇಳಿದ್ದರೆ ರೈತರಿಗೆ ಅರ್ಜಿ ಹಾಕಿಕೊಳ್ಳುವ ಕಷ್ಟವಾದರೂ ತಪ್ಪುತ್ತಿತ್ತು. ಈಗಲಾದರೂ ಆ ನಾರಮ್ಸ್ ಏನಿವೆ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು ?

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ನಾರಮ್ಸ್ ಏನೆಂಬುದು ಎಲ್ಲಾ ಮಾನ್ಯ ಸದಸ್ಯರಿಗೂ ಗೊತ್ತಿದೆ. ತಮಗೂ ಸಹ ಗೊತ್ತಿದೆ. ಕಳೆದ ೩ ವರ್ಷಗಳಿಂದ ೬ ಆಣೆಗಿಂತ ಕಡಿಮೆ ಬೆಳೆ ಆಗಿದೆ ಎಂದು ಡಿ. ಸಿ. ಅವರು ಘೋಷಣೆ ಮಾಡಬೇಕು. ಮತ್ತು ಯಾರು ಯಾರು ಕಳೆದ ೩ ವರ್ಷಗಳಲ್ಲಿ ತೆಗೆದುಕೊಂಡ ಸಾಲದ ಪೈಕಿ ಕೇವಲ ೨೫ ಪರ್ಸೆಂಟ್ ಮಾತ್ರ ಕಟ್ಟಿ ಉಳಿದ ಹಣ ಕಟ್ಟಲು ಕಷ್ಟವಿದೆ ಎಂದು ಅರ್ಜಿ ಹಾಕಿದ್ದಾರೋ ಅಂತಹವರ ಅರ್ಜಿಗಳನ್ನು ಪರಿಶೀಲನೆ ಮಾಡಲು ನಾವು ಹೇಳಿದ್ದೆವು. ಆದರ ಪ್ರಕಾರ ಬೇರೆ ಜಿಲ್ಲೆಗಳಲ್ಲಿ ಕೆಲವರಿಗೆ ವಿನಾಯಿತಿ ಸಿಕ್ಕಿದೆ. ಆದರೆ ತುಮಕೂರು ಜಿಲ್ಲೆಯಲ್ಲಿ ಯಾರಿಗೂ ಸಿಕ್ಕಿಲ್ಲ.

ಆದರೆ ಬೆಳೆ ಲೆಕ್ಕ ಬರೆಯುವ ವಿಚಾರದಲ್ಲಿ ಎಲ್ಲಿಯಾದರೂ ಅಧಿಕಾರಿಗಳು ಕರ್ತವ್ಯಲೋಪ ಮಾಡಿದ್ದರೆ, ಅಂಥಾದ್ದನ್ನು ಸರ್ಕಾರದ ಗಮನಕ್ಕೆ ತಂದರೆ ಸರಿಪಡಿಸಲಾಗುತ್ತದೆ.

ಶ್ರೀ ಡಿ. ಟಿ. ಮಾಯಣ್ಣ.—ರೈತರು ಪಡೆದ ಸಾಲವನ್ನು ಸಕಾಲದಲ್ಲಿ ತೀರಿಸದಿದ್ದರೆ ೪ ಪರ್ಸೆಂಟ್ ಸುಸ್ತಿ ಬಡ್ಡಿ ಸಹ ಹಾಕುತ್ತೀರಿ. ಸರ್ಕಾರದವರು ಅಡ್ಮಿನಿಸ್ಟ್ರೇಷನ್‌ಗೆ ಇಷ್ಟೊಂದು ಕಾಣ ಖರ್ಚು ಮಾಡುವಾಗ ಸುಸ್ತಿ ಬಡ್ಡಿ ಏತಕ್ಕೆ ಹಾಕಬೇಕು ? ರಿಜರ್ವ್ ಬ್ಯಾಂಕ್‌ನವರು ಏನು ಬಡ್ಡಿ ವಿಧಿಸುತ್ತಾರೋ ಅಷ್ಟೇ ಬಡ್ಡಿಯನ್ನು ರೈತರಿಂದ ಏತಕ್ಕೆ ವಸೂಲಿ ಮಾಡಬಾರದು ?

ಅಧ್ಯಕ್ಷರು.—ಅದು ಬೇರೆ ಪ್ರಶ್ನೆ.

ಶ್ರೀ ಜಿ. ರಾಜೂಗೌಡ.—ತಾವು ಹಾಕಿರತಕ್ಕ ಷರತ್ತು ಕೃಷಿಕಾರ್ಮಿಕರಿಗೆ ಅನ್ವಯಿಸುವುದಿಲ್ಲ ಆದುದರಿಂದ ಕೃಷಿ ಕಾರ್ಮಿಕರ ಆರ್ಜಿಗಳನ್ನು ಪರಿಶೀಲನೆ ಮಾಡಿದ್ದೀರಾ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಬ್ಯಾಂಕುಗಳಿಂದ ಸಾಲ ಕೊಟ್ಟಿರತಕ್ಕಂಥಾದ್ದು ಕೃಷಿಕರಿಗೆ ಕೃಷಿಕಾರ್ಮಿಕರಿಗೆ ಯಾರಿಗೂ ಕೊಟ್ಟಿಲ್ಲ, ಅವರಿಗೆ ಕೊಡುವುದು ಬೇರೆ ಸಾಲ. ಇದರೊಳಗೆ ಬರುವುದಿಲ್ಲ.

ಶ್ರೀ ಜಿ.ರಾಜೂಗೌಡ.—ಸಹಕಾರ ಸಂಘಗಳಿಂದ ಕೃಷಿ ಕಾರ್ಮಿಕರು ಸಾಲವನ್ನು ತೆಗೆದುಕೊಂಡಿರುತ್ತಾರೆ, ಅಂಥವರಿಗೆ ತಾವು ಕೊಟ್ಟಿರತಕ್ಕ ವಿನಾಯಿತಿ ಏನು ? ಅವರೂ ಆರ್ಜಿ ಹಾಕಿಕೊಂಡಿದ್ದಾರೆ.

ಅಧ್ಯಕ್ಷರು.—ಈ ಪ್ರಶ್ನೆ ಇರುವುದು ಲ್ಯಾಂಡ್‌ಲಾರ್ಡ್ಸ್ ಬಗ್ಗೆ ಕೃಷಿಕಾರ್ಮಿಕರ ಬಗ್ಗೆ ಅಲ್ಲ.

ಶ್ರೀ ಡಿ. ಟಿ. ರಾಮು.—ಈ ಸಾಲವನ್ನು ಮನ್ನಾ ಮಾಡುತ್ತೇವೆ ಎಂದು ಹೊರಟಾಗ, ಆರಾಶೆ ಬೆಳೆ ಆಗದೇ ಇರತಕ್ಕಂಥ ತಾಲ್ಲೂಕುಗಳಲ್ಲಿ, ಮತ್ತೆ ಒಂದೇ ಸಮನೆ ೩ ವರ್ಷಗಳಿಂದ ಬೆಳೆ ಆಗದೇ ಇರತಕ್ಕಂಥ ತಾಲ್ಲೂಕುಗಳಲ್ಲಿ ಬರತಕ್ಕಂಥ ಸಾಲದ ಆರ್ಜಿಗಳಿಗೆ ಮನ್ನಣೆ ಕೊಡುವುದಿಲ್ಲ ಎಂದು ಷರತ್ತು ಇರುವಾಗ ಆ ತಾಲ್ಲೂಕುಗಳಲ್ಲಿ ಆರ್ಜಿಗಳನ್ನು ತೆಗೆದುಕೊಳ್ಳಬಾರದಾಗಿತ್ತು. ಪ್ರತಿಯೊಬ್ಬರೂ ಒಂದೊಂದು ಆರ್ಜಿಗೆ ೧೦೦ ರೂಪಾಯಿ ಕೊಟ್ಟು ಹಾಕಿದ್ದಾರೆ, ತಾವು ಹೇಳಿದ್ದು ನೋಡಿದರೆ ಒಬ್ಬರಿಗೂ ವಿನಾಯಿತಿ ಯಿಲ್ಲ. ಆದುದರಿಂದ ಇದನ್ನು ಮಾಡಿದಂಥ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.— ಕ್ರಮವಾಗಿ ಮಾಡಿದರೆ ಕ್ರಮ ತೆಗೆದುಕೊಳ್ಳುವುದು ಎಲ್ಲಿ ಬರುತ್ತದೆ, ಆ ಪ್ರಶ್ನೆ ಉದ್ಭವವಾಗುವುದಿಲ್ಲ.

ಶ್ರೀ ಗಟ್ಟಿ ಚಂದ್ರಶೇಖರ್.—ಸರ್ಕಾರದವರು ಸಾಲ ವಜಾ ಮಾಡುತ್ತೇವೆಂದು ಹೇಳಿದರೆ, ಸಹಜವಾಗಿ ವಜಾ ಮಾಡುತ್ತಾರೆಂದು ಇರುವವರೆಲ್ಲಾ ಆರ್ಜಿಗಳನ್ನು ಹಾಕುತ್ತಾರೆ. ಒಂದೊಂದು ಆರ್ಜಿಗೆ ೧೦೦ ರೂಪಾಯಿ ಮೇಲೆ ಖರ್ಚಾಗಿದೆ. ಉತ್ತರದಲ್ಲಿ ಮಂತ್ರಿಗಳು ೪೭ ಸಾವಿರ ಆರ್ಜಿಗಳನ್ನು ಪರಿಶೀಲಿಸಲಾಗಿದೆ ಎಂದು ಹೇಳಿದ್ದಾರೆ. ೪೭ ಸಾವಿರ ಆರ್ಜಿಗಳು ಪರಿಶೀಲನೆಯಾಗಿದೆ, ಪರಿಹಾರ ಕೊಟ್ಟಿಲ್ಲ ಎಂದು ಹೇಳಿದ್ದೀರಿ. ವಜಾ ಮಾಡುತ್ತೇವೆಂದು ಏಕೆ ಘೋಷಣೆ ಮಾಡಿದಿರಿ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.— ನಾವು ೧೫ ಲಕ್ಷ ಕೊಟ್ಟು ಜಿಲ್ಲಾ ಬ್ಯಾಂಕಿನ ಅಧ್ಯಕ್ಷರು, ಒಳಗೊಂಡ ಕಮಿಟಿಮಾಡಿ ಆರ್ಜಿಗಳನ್ನು ಪರಿಶೀಲನೆಮಾಡಿ ಎಂದು ಹೇಳಿ, ಆರ್ಜಿಗಳನ್ನು ಪರಿಶೀಲನೆ ಮಾಡತಕ್ಕಂಥ ಸಂದರ್ಭದಲ್ಲಿ ವಿನಾಯಿತಿ ಸಾಧುವಾದುದಲ್ಲ ಎಂದು ತೀರ್ಮಾನ ಕೊಟ್ಟರೆ ಸರ್ಕಾರ ಏನು ಮಾಡುತ್ತದೆ.

ಶ್ರೀ ಪಿ. ಎನ್. ರೆಡ್ಡಿ.— ಕೆಲವು ನಾರ್ಮ್ಸ್ ಮಾಡಿ ಸಾಲ ಮನ್ನಾ ಮಾಡುತ್ತೇವೆಂದು ಆಜ್ಞೆ ಮಾಡಿದರು. ೧೯೭೯ನೇ ಇಸವಿಯಲ್ಲಿ ೬ ಆಣೆಗಿಂತ ಕಡಿಮೆ ಬೆಳೆ ಆಗಿರುವುದು ಯಾವುದು ಇದೆಯೋ ಅದಕ್ಕೆ ಮಾಡಿದ್ದಾರೆ. ಆಗ ಅನೇಕ ಅಪ್ಲಿಕೇಷನ್‌ಗಳು ಸಿಕ್ಕಲಿಲ್ಲ. ನಮ್ಮ ಕೋಲಾರ ಜಿಲ್ಲೆಯಲ್ಲಿ ೨೦ ಲಕ್ಷಕ್ಕೆ ಎರಡೂವರೆ ಲಕ್ಷ ಮನ್ನಾ ಮಾಡುವುದಕ್ಕೆ ಸಾಧ್ಯವಾಯಿತು. ೧೯೮೦ ರಲ್ಲಿ ಆರ್ಜಿಗಳನ್ನು ಕರೆದಿದ್ದು, ಸೆನ್ಸಸ್ ಪ್ರಕಾರ ೬ ಆಣೆಗಿಂತ ಕಡಿಮೆ ಬೆಳೆ ಆಗಿರುವವರ ಆರ್ಜಿಗಳನ್ನು ಪುನರ್ವಿಮರ್ಶಿಸಿ ಮನ್ನಾ ಮಾಡಲಿಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಪರಿಶೀಲನೆ ಮಾಡುತ್ತೇನೆ.

ಶ್ರೀ ಪಿ. ಮಂಜಿಯಪ್ಪ.—ಮಾನ್ಯ ಡಿ. ಟಿ. ರಾಮು ಅವರು ಎರಡು ಷರತ್ತುಗಳನ್ನು ಹೇಳಿದರು. ಅದರ ಜೊತೆಗೆ ಇನ್ನೂ ಒಂದು ಷರತ್ತು ಇದೆ. ೩ ವರ್ಷ ಕಂಟಿನ್ಯೂಯಸ್ ಆಗಿ ಮಳೆ ಆಗಿರಕೂಡದು ೬ ಆಣೆ ಪಹಣಿ ಇರಬೇಕು ಆ ಅವಧಿಯಲ್ಲಿ ಅವನು ಸಾಲ್ಯನೇ ಒಂದು ಭಾಗ ಸಾಲವನ್ನೂ ಕೂಡ ತೀರಿಸಿರ ಬೇಕು ಎಂದು ಇದೆ. ಇದು ಒಂದಕ್ಕೊಂದು ವಿರೋಧಾಭಾಸ ಆಗತಕ್ಕ ಸಂದರ್ಭ ಬರುತ್ತದೆ. ಆದುದರಿಂದ ತಾವು ಕೊಡತಕ್ಕಂಥ ಪರಿಹಾರವನ್ನು ರೆಟ್ರಾಸ್ಪೆಕ್ಟೀವಾಗಿ ಮಾಡಿದರೆ ಕಷ್ಟವಾಗುತ್ತದೆ. ಪ್ರಾಸ್ಪೆಕ್ಟೀವಾಗಿ ಮಾಡಿ, ಬೇರೆ ಬೇರೆ ನಾರ್ಮ್ಸ್ ಫಿಕ್ಸ್ ಮಾಡುವುದನ್ನು ಪುನರ್ಪರಿಶೀಲನೆ ಮಾಡುತ್ತೀರಾ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—೨೫ ಪರ್ಸೆಂಟ್ ಸಾಲ ಪಾಪಸ್ ಕೊಟ್ಟಿದ್ದರೆ ಅರ್ಜಿಯನ್ನು ಪರಿಶೀಲನೆಮಾಡುತ್ತೇವೆಂದು ಸರ್ಕಾರ ಷರತ್ತು ಹಾಕಿರತಕ್ಕಂಥಾದ್ದು ಆ ಸಾಲಗಾರರಿಗೆ ಅನುಕೂಲ ವಾಗಲಿ ಎಂದು. ಯಾವುದೇ ೩ ವರ್ಷಗಳಲ್ಲಿ ೨೫ ಪರ್ಸೆಂಟ್ ಸಾಲ ಕೊಟ್ಟಿದ್ದರೂ ಸಾಲ ತೀರಿಸಬೇಕು ಎನ್ನುವ ಮನೋಭಾವದಿಂದ ಕೊಟ್ಟಿದ್ದಾನೆಂದು ಪರಿಗಣಿಸುತ್ತೆವೆಯೇ ಹೊರತು ಅದಕ್ಕೆ ತದ್ವಿರುದ್ದವಾಗಿ ಅಲ್ಲ. ಸಾಲಗಾರರಿಗೆ ಅನುಕೂಲವಾಗಲಿ ಎಂದು ಷರತ್ತನ್ನು ಹಾಕಿದ್ದೇವೆ.

ಶ್ರೀ ಗಟ್ಟಿ ಚಂದ್ರಶೇಖರ್.— ೧೫ ಲಕ್ಷ ರೂಪಾಯಿ ತುಮಕೂರಿನಲ್ಲಿ ಕೊಟ್ಟಿದ್ದಾರೆಂದು ಹೇಳಿದರು. ರೈತರು ಅರ್ಜಿಗಳನ್ನು ಹಾಕಿದ್ದಾರೆ. ಆ ಅರ್ಜಿಗಳನ್ನು ಪರಿಶೀಲನೆಮಾಡಿ ರಿಲ್ಯಾಕ್ಸ್ ಮಾಡುತ್ತೀರೋ ಹೇಗೆ. ಇನ್ನು ಮುಂದಾದರೂ ಸಪ ಸಾಲ ವಜಾ ಮಾಡುತ್ತೇವೆಂದು ಹುಚ್ಚಿ ಹಿಡಿಸುವಂಥ ಕೆಲಸವನ್ನು ಮಾಡುತ್ತೀರೋ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಹುಚ್ಚು ಹಿಡಿಸಿದಂಥಾದ್ದು ಸರ್ಕಾರ ಅಲ್ಲ, ನಮ್ಮ ಮಧ್ಯವರ್ತಿ ಜನ ಹುಚ್ಚು ಹಿಡಿಸಿದ್ದು. ಸರ್ಕಾರ ಸರಿಯಾಗಿ ಹೋಗುತ್ತಾ ಇದ್ದು, ಏನಾಯಿತಿಗೆ ಸರ್ಕಾರಣಗಳನ್ನು ಕೊಟ್ಟಿತ್ತು. ಮಧ್ಯವರ್ತಿ ಜನ ಭ್ರಾಂತಿ ಹುಟ್ಟಿಸಿ ಹಣವನ್ನು ಖರ್ಚುಮಾಡಿಸಿದರು.

ಶ್ರೀ ಎಸ್. ಲಿಂಗಯ್ಯ.—ಷರತ್ತಿಗೆ ತಾವು ಒಳಪಡಿಸಬಾರದು. ಆ ಷರತ್ತನ್ನು ಕೈಬಿಟ್ಟು ಬೇರೆ ಮಾನದಂಡದಿಂದ ಆಳತೆ ಮಾಡಬೇಕು. ಈಗ ಏನು ತಾವು ಸಾಲ ಮನ್ನಾ ಮಾಡುತ್ತೇವೆಂದು ಹೇಳಿದಿರಿ ಅದಕ್ಕೆ ಯಾರು ಯೋಗ್ಯರಿದ್ದಾರೆ ಅವರ ಬಗ್ಗೆ ಬೇರೆ ಮಾನದಂಡದಿಂದ ಆಳೆಯಬೇಕು ಎನ್ನುವುದು ನನ್ನ ಮನವಿ. ಕೊಡುವುದಕ್ಕೆ ಅಶಕ್ತರಾಗಿದ್ದು ತೀರಿಸಬಲ್ಲ ಶಕ್ತಿ ಇಲ್ಲದವರಿಗೆ ಬಡ್ಡಿ, ಸುಸ್ತಿ ಬಡ್ಡಿ ವಜಾ ಮಾಡುವುದನ್ನು ತಾವು ಪರಿಶೀಲನೆ ಮಾಡುತ್ತೀರಾ, ಆಮೇಲೆ ರಾಜ್ಯಾದ್ಯಂತ ತೆಗೆದುಕೊಂಡಿರತಕ್ಕ ಎಲ್ಲಾ ಸಾಲಗಾರರಿಗೂ ಸುಸ್ತಿ ಬಡ್ಡಿಯನ್ನು ವಜಾ ಮಾಡುವುದಕ್ಕೆ ಪರಿಶೀಲನೆ ಮಾಡುತ್ತೀರಾ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಸರ್ಕಾರ ಇದರ ಬಗ್ಗೆ ಯೋಚನೆ ಮಾಡುತ್ತದೆ.

Seepage of water in atchkat area of Hemavathy Right Bank Canal in Arakalgud Taluk.

67 SRI K. B. MALLAPPA (Arakalgud) Will the Minister of State for Major and Medium Irrigation be pleased to state.—

(a) whether it is a fact that the villagers of Anniganahally, Haradur, Ganganalu and Uppara Koppal in Kasba Hobli, Arakalgud are facing hardship due to seepage water in atchkat area of Hemavathy Right Bank Canal ;

(b) whether the people of these villages have represented to the Government to shift these villages;

(c) if so, the action taken by the Government :